**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ಕೊಡಗು-ಮಡಿಕೇರಿ**

**<u>ಎಸ್.ಸಿ ಸಂಖ್ಯೆಃ 78/2023</u>**

ಪ್ರಾಸಾಃ 2
ಚಾಸಾಃ6

ಸಾಕ್ಷಿದಾರರ ಹೆಸರು: ರವಿ ಎನ್.ವಿ.

ತಂದೆಯ ಹೆಸರು : ವೀರಣ್ಣಯ್ಯ

ವಯಸ್ಸು : 54 ವರ್ಷ

ವೃತ್ತಿ : ಕೃಷಿ

ವಾಸ : ನಾಕಲಗೂಡು, ಶನಿವಾರಸಂತೆ.

**ಸಾಕ್ಷಿಯನ್ನು ದಿನಾಂಕ 18-03-2025 ರಂದು ಕರೆಯಿಸಿ
ಪ್ರಮಾಣ ವಚನ ಭೋಧಿಸಲಾಯಿತು.**

**<u>ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>**

1. ನನಗೆ ಚಾಸಾ-1 ರವರ ಪರಿಚಯ ಇದೆ. ಈಗ ನಾನು ನೋಡುತ್ತಿರುವ ದಿನಾಂಕ 23-07-2022 ರಂದು ತಯಾರಿಸಿದ್ದ ಮಹಜರ್ ಹಾಗೂ ನಕಾಶೆಯಲ್ಲಿ ನನ್ನ ಸಹಿ ಇದ್ದು, ಸದರಿ ಮಹಜರ್ ನ್ನು ನಿಪಿ-1 ಎಂದು , ಅದರಲ್ಲಿ ಇದ್ದ ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು, ನಕಾಶೆಯನ್ನು ನಿಪಿ-2 ಎಂದು, ಅದರಲ್ಲಿ ಇರುವ ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

2. ಎರಡು ಮೂರು ವರ್ಷಗಳ ಹಿಂದೆ ನಾನು ನಾಕಲಗೂಡಿನಲ್ಲಿ ತೋಟದಿಂದ ನಮ್ಮ ಮನೆಗೆ ಬರುತಿದ್ದಾಗ ಶನಿವಾರಸಂತೆ ಪೊಲೀಸರು ಚಾಸಾ-1 ರವರ ಮನೆಯ ಮುಂದೆ ಬಂದಿದ್ದು, ಪೊಲೀಸರು ನನ್ನನ್ನು ಕರೆದು ತಾವು ಅಲ್ಲಿಗೆ ಬಂದ ಬಗ್ಗೆ ಒಂದು ಸಹಿ ಹಾಕಬೇಕು ಎಂದು ಹೇಳಿದ ಕಾರಣ ನಾನು ಸಹಿ

ಹಾಕಿದ್ದೇನೆ. ನಿಪಿ-1 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಯಾವ ವಿಷಯಕ್ಕಾಗಿ ಪೊಲೀಸರು ಅಲ್ಲಿಗೆ ಬಂದಿದ್ದರು ಎಂದು ನನಗೆ ಗೊತ್ತಿಲ್ಲ. ಈಗ ನಾನು ನೋಡುತ್ತಿರುವ ಎರಡು ಫೋಟೊಗಳಲ್ಲಿ ನಾನು ಕಾಣುತಿದ್ದು, ಅವುಗಳನ್ನು ನಿಪಿ-3 ಎಂದು ಗುರುತಿಸಲಾಯಿತು. ನಿಪಿ-3 ರ ಫೋಟೊಗಳನ್ನು ನಾವು ಬರುತಿದ್ದ ದಾರಿಯಲ್ಲಿಯೇ ಪೊಲೀಸರು ತೆಗೆದಿದ್ದರು ಆದರೆ, ಯಾವ ಕಾರಣಕ್ಕಾಗಿ ಫೋಟೊಗಳನ್ನು ತೆಗೆದಿದ್ದರು ಎಂದು ನನಗೆ ಗೊತ್ತಿಲ್ಲ.

3. ಈಗ ನಾನು ನೋಡುತ್ತಿರುವ ದಿನಾಂಕ 13-08-2022 ರ ಮಹಜರ್ ನಲ್ಲಿಯೂ ಸಹಾ ನನ್ನ ಸಹಿ ಇದ್ದು, ಅದನ್ನು ನಿಪಿ-4 ಎಂದು ಅದರಲ್ಲಿ ಇರುವ ಸಾಕ್ಷಿ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ನಿಪಿ-4 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಮುಂದುವರೆದು, ಅದನ್ನು ಯಾವಾಗ, ಎಲ್ಲಿ ಹಾಕಿದ್ದೇನೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮದಲ್ಲಿ ಪೊಲೀಸರು ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ. ನ್ಯಾಯಾಲಯದ ಎದುರು ಇರುವ ದೊಣ್ಣೆಯನ್ನು ನಾನು ನೋಡಿಲ್ಲ ಆದರೆ, ಈಗ ನಾನು ನೋಡುತ್ತಿರುವ 4 ಫೋಟೊಗಳಲ್ಲಿ ನಾನು ಕಾಣುತಿದ್ದು, ಸದರಿ ನಾಲ್ಕು ಫೋಟೊಗಳನ್ನು ಒಟ್ಟಾಗಿ ನಿಪಿ-5 ಎಂದು ಗುರುತಿಸಲಾಯಿತು. ಯಾವ ಕಾರಣಕ್ಕಾಗಿ ಸದರಿ ಫೋಟೊಗಳಿಗೆ ನಾನು ನಿಂತಿದ್ದೇನೆ ಎಂದು ಗೊತ್ತಿಲ್ಲ. ಪೊಲೀಸರು ನನ್ನ ಬಳಿ ಯಾವುದೇ ಹೇಳಿಕೆ ಪಡೆದಿಲ್ಲ.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ಪೊಲೀಸರ ಮುಂದೆ ನೀಡಿದ ಹೇಳಿಕೆ ಮತ್ತು ಮುಖ್ಯ ವಿಚಾರಣೆಯನ್ನು ಪರಿಶೀಲಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಗಿದೆ).**

**<u>ಪಾಟೀಸವಾಲು- ಸರ್ಕಾರಿ ಅಭಿಯೋಜಕರಿಂದಃ</u>**

4. ದಿನಾಂಕ 23-07-2022 ರಂದು ನಾನು ನನ್ನನಾಕಲಗೂಡಿನ ಮನೆಯಲ್ಲಿ

ಇದ್ದಾಗ ಶನಿವಾರಸಂತೆ ಪೊಲೀಸರು ಚಾಸಾ-1 ರವರ ವಾಸದ ಮನೆಯ ಬಳಿಗೆ ನನ್ನನ್ನು ಕರೆದಿದ್ದರೂ ಎಂದರೆ ಸರಿಯಲ್ಲ. ನನ್ನ ಹಾಗೂ ಚಾಸಾ-7 ರವರ ಸಮಕ್ಷಮ ಪೊಲೀಸರು ಅಲ್ಲಿ ಈ ಪ್ರಕರಣದ ಮಾಹಿತಿಯನ್ನು ಹೇಳಿ ಚಾಸಾ-1 ರವರು ತೋರಿಸಿದ ಮನೆಗೆ ಕಂದಾಯ ಇಲಾಖೆಯವರು ಸೀಲು ಮಾಡಿದ್ದು, ಒಳಗೆ ಹೋಗಲು ಸಾಧ್ಯವಾಗದ ಇದ್ದುದ್ದರಿಂದ ಹೊರಗಡೆ ನಿಂತು ಮಧ್ಯಾಹ್ನ 1.30 ಗಂಟೆಯಿಂದ 2.30 ಗಂಟೆಯವರೆಗೆ ನಿಪಿ-1 ರಂತೆ ಮಹಜರ್ ತಯಾರಿಸಿ, ನಿಪಿ-2 ರಂತೆ ನಕಾಶೆಯನ್ನು ತಯಾರಿಸಿ, ಸ್ಥ,ಳದಲ್ಲಿ ಅವುಗಳಿಗೆ ನನ್ನ ಸಹಿಗಳನ್ನು ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ಅದೇ ಸಮಯದಲ್ಲಿ ನಿಪಿ-3 ರಂತೆ ಅಲ್ಲಿಯೇ ಫೋಟೊಗಳನ್ನು ತೆಗೆದಿದ್ದರೂ ಎಂದರೆ ಸರಿಯಲ್ಲ.

5. ದಿನಾಂಕ 13-08-2022 ರಂದು ನಾನು ಮಧ್ಯಾಹ್ನ ಸಮಯದಲ್ಲಿ ತೋಟಕ್ಕೆ ಹೋಗುತ್ತಿರುವಾಗ ಶನಿವಾರಸಂತೆ ಪೊಲೀಸರು ಚಾಸಾ-1 ರವರ ಮನೆಯ ಬಳಿ ಇದ್ದು, ನನ್ನನ್ನು ಕರೆದು ಮಹಜರ್ ಸಮಯಕ್ಕೆ ನನ್ನನ್ನು ಪಂಚರಾಗುವಂತೆ ನನ್ನನ್ನು ಕೋರಿಕೊಂಡಿದ್ದು, ನಾನು ಅದಕ್ಕೆ ಒಪ್ಪಿಕೊಂಡಿದ್ದೆ ಎಂದರೆ ಸರಿಯಲ್ಲ. ನಂತರ ಚಾಸಾ-1 ಮನೆಯ ಒಳಗಡೆ ಹೋಗಿ ಆರೋಪಿತರು ಹಲ್ಲೆ ಮಾಡಿದ್ದ ಒಂದು ಕಾಫಿ ದೊಣ್ಣೆಯನ್ನು ತೋರಿಸಿ ಅದನ್ನು ಹಾಜರುಪಡಿಸಿದ್ದು, ನನ್ನ ಸಮಕ್ಷಮದಲ್ಲಿ ಪೊಲೀಸರು ಅದನ್ನು ಅಮಾನತ್ತುಪಡಿಸಿಕೊಂಡು ಮಧ್ಯಾಹ್ನ 2.00 ಗಂಟೆಯಿಂದ 3.00 ಗಂಟೆಯವರೆಗೆ ನಿಪಿ-4 ರಂತೆ ಮಹಜರ್ ತಯಾರಿಸಿದ್ದು, ನಾನು ಸ್ಥಳದಲ್ಲಿ ಅದಕ್ಕೆ ಸಹಿ ಹಾಕಿದ್ದೆ ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ನಿಪಿ-5 ರಂತೆ ಪೊಲೀಸರು ಅದೇ ಸ್ಥಳದಲ್ಲಿ ಫೋಟೊಗಳನ್ನು ತೆಗೆದಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಅಮಾನತ್ತುಪಡಿಸಿಕೊಂಡ ದೊಣ್ಣೆ ನ್ಯಾಯಾಲಯದ ಎದುರು ಇರುವ ದೊಣ್ಣೆಯಾಗಿದೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಅದೇ ದಿನ

ಪೊಲೀಸರಿಗೆ ಹೇಳಿಕೆ ನೀಡಿದ್ದ ಎಂದರೆ ಸರಿಯಲ್ಲ. ಈಗ ಸಾಕ್ಷಿಗೆ ಒಂದು ಹೇಳಿಕೆ ಓದಿ ಹೇಳಿ "ನಾನು ಈ ಮೇಲಿನ ವಿಳಾಸದಲ್ಲಿ ------------------------------------------------ಎಂಬುದಾಗಿ ” ಪೊಲೀಸರಿಗೆ ಹೇಳಿಕೆ ನೀಡಿದ್ದ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-6 ಎಂದು ಗುರುತಿಸಲಾಯಿತು. ಆರೋಪಿತರು ನನಗೆ ಪರಿಚಿತರಾಗಿದ್ದರಿಂದ ಮತ್ತು ಅವರು ಕೋರಿಕೊಂಡ ಮೇರೆಗೆ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು- 1 ರಿಂದ 4 ನೇ ಆರೋಪಿತರ ಪರವಾಗಿ ಶ್ರೀ ಸಿ.ಎಸ್.ಪಿ. ವಕೀಲರಿಂದಃ**

**ಇರುವುದಿಲ್ಲ.**

**ಪಾಟೀಸವಾಲು- 5 ನೇ ಆರೋಪಿತರ ಪರವಾಗಿ ಶ್ರೀ ಪಿ.ಕೆ.ಎಂ. ವಕೀಲರಿಂದಃ**

ಇರುವುದಿಲ್ಲ.

**ಪಾಟೀಸವಾಲು- 6 ಮತ್ತು 7 ನೇ ಆರೋಪಿತರ ಪರವಾಗಿ ಶ್ರೀ ಡಿ.ಡಿ.ಸಿ ವಕೀಲರಿಂದಃ**

ಇರುವುದಿಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-xxx

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು-ಮಡಿಕೇರಿ